ಶ್ರೀ ಹೆಚ್.ಡಿ. ರೇವಣ್ಣ:– ಇದರ ಬಗ್ಗೆ ಪ್ರಯತ್ನ ಪಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೆ, ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ತೀರ್ಮಾನವನ್ನು ತೆಗೆದುಕೊಳ್ಳಿ. ಒಂದು ಸಾರಿ ತಾವು ಅಲ್ಲಿಗೆ ಹೋಗಿ ರಸ್ತೆಯನ್ನು ನೋಡಿಕೊಂಡು ಬರಬೇಕು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಒಂದು ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆ, ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳಲ್ಲಿ ರಸ್ತೆಗಳನ್ನು ನೋಡುವುದಕ್ಕೆ ಹೋಗುತ್ತಿದ್ದೆವು. ಆಗ ಅಂತಹ ಸ್ಥಿತಿ ಇತ್ತು, ಇವತ್ತಿನದಿವಸ ಅಲ್ಲಿ ಓಡಾಟ ಮಾಡುವುದಕ್ಕೆ ಆಗುವುದಿಲ್ಲ, ವಾಹನಗಳು ಆ ರಸ್ತೆಯಲ್ಲಿ ಹೋಗುವುದಕ್ಕಾಗುವುದಿಲ್ಲ ಅಂತಹ ಸ್ಥಿತಿ ಇದೆ. ಇದು ನಮ್ಮ ನಿಮ್ಮ ಯೋಜನೆ ಎಂದು ಹಣಕಾಸಿನ ಸ್ಥಿತಿ ನೋಡಿಕೊಂಡು ಹೋದರೆ ಅಲ್ಲಿ ಜನಗಳು ಶಾಸಕರು ಓಡಾಡುವುದಕ್ಕೆ ಆಗದೇ ಇರುವಂತಹ ಸ್ಥಿತಿ ಇದೆ. ತಾವು ಆದ್ಯತೆಯ ಮೇಲೆ ಆ ವರ್ಕ್‌ನ್ನು ತೆಗೆದುಕೊಳ್ಳುವ ಬಗ್ಗೆ ಏನಾದರೂ ಪ್ರಯತ್ನವನ್ನು ಮಾಡುತ್ತೀರಾ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಎಲ್ಲಿ ರಸ್ತೆಗಳು ದುರಸ್ಥಿಯಾಗಬೇಕೋ ಆ ಕೆಲಸವನ್ನು ಮಾಡಿಸುವ ಬಗ್ಗೆ ಪ್ರಯತ್ನವನ್ನು ಮಾಡುತ್ತೇನೆ.

ಮುಂಡರಗಿ ಸಿಂಗಟಾಲೂರಿನ ಕಪ್ಪತ್ ಗುಡ್ಡದಲ್ಲಿ ಸಸಿಗಳನ್ನು ನೆಡುವ ಬಗ್ಗೆ

8(490) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಡೋಣಿ ಗ್ರಾಮದ ನಂದಿವೇರಿ ಮಠದ ಹತ್ತಿರ ಒಂದು ಲಕ್ಷ ಸಸಿಗಳನ್ನು ನೆಟ್ಟಿರುವಂತೆಯೇ ಮುಂಡರಗಿ ತಾಲ್ಲೂಕು ಶಿಂಗಟಾಟೂರು ಶ್ರೀ ವೀರಭದ್ರಸ್ವಾಮಿ ದೇವಾಲಯವಿರುವ ಕಪ್ಪತ್ ಗುಡ್ಡದಲ್ಲಿ ಒಂದು ಲಕ್ಷ ಸಸಿಗಳನ್ನು ನೆಡಲಾಗುವುದೇ;

ಆ) ಹಾಗಿದ್ದಲ್ಲಿ, ಇದಕ್ಕೆ ಬೇಕಾದ ಹಣಕಾಸು ನೆರವು ಒದಗಿಸಲಾಗುವುದೆ;

ಇ) ಪ್ರತಿ ವರ್ಷ ಸಸಿಗಳನ್ನು ನೆಡಲು ಕಾರ್ಯಕ್ರಮ ಹಾಕಿಕೊಂಡು ಅದಕ್ಕೆ ಹಣಕಾಸು ನೆರವು ಒದಗಿಸಲಾಗುವುದೆ?

ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ. (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಸಿಂಗಟಾಲೂರಿನ ಶ್ರೀ ವೀರಭದ್ರ ಸ್ವಾಮಿ ದೇವಾಲಯವಿರುವ ಕಪ್ಪತ್ತ ಗುಡ್ಡದ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಸಸಿ ನೆಡುವ ಬಗ್ಗೆ ಯಾವುದೇ ಅನುಮೋದಿತ ಕಾರ್ಯ ಯೋಜನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದರ ಬಗ್ಗೆ ಅಧಿಕಾರಿಗಳು ವಿವರವಾಗಿ ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ನಾನು ಪ್ರಶ್ನೆಯನ್ನು ಇನ್ನಷ್ಟು ವಿವರವಾಗಿ ಕೇಳ ಬೇಕಾಗಿತ್ತು. ಇಲ್ಲಿ ನನ್ನ ಪ್ರಶ್ನೆ ಇರುವುದು ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಡೋಣಿ ಗ್ರಾಮದ ನಂದಿವೇರಿ ಮಠದ ಹತ್ತಿರ ಒಂದು ಲಕ್ಷ ಸಸಿಗಳನ್ನು ನೆಟ್ಟಿರುವಂತೆಯೇ ಸಿಂಗಟಾಲೂರು ವೀರಭದ್ರಸ್ವಾಮಿ ದೇವಾಲಯವಿರುವ ಕಪ್ಪತ್ ಗುಡ್ಡದಲ್ಲಿ ಸಸಿಗಳನ್ನು ನೆಟ್ಟಿರುವರೇ ಎಂದು ನಾನು ಪ್ರಶ್ನೆಯನ್ನು ಕೇಳಲಾಗಿತ್ತು. ಬಹುಶಃ ಇದರ ಬಗ್ಗೆ ಮಾಹಿತಿ

ಬಂದಿದೆ ಎಂದು ನಾನು ಅರ್ಥಮಾಡಿಕೊಳ್ಳುತ್ತೇನೆ. ಅಲ್ಲಿ ಆ ಸಸಿಗಳನ್ನು ನೆಟ್ಟಿದ್ದಾರೆಯೇ ಹೇಗೆ ಅಲ್ಲಿ ಸಸಿಗಳನ್ನು ನೆಟ್ಟಿದ್ದರೆ ಅದಕ್ಕೆ ಎಷ್ಟು ಹಣ ಖರ್ಚಾಗಿದೆ? ಅದು ಯೋಜನೆಯಲ್ಲಿ ಇತ್ತಾ? ಅದು ಯೋಜನೆಯಲ್ಲಿ ಇಲ್ಲದೆಯೇ ಮಾಡಿದ್ದಾರೆಯೇ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು. ತಮಗೆ ಅದರ ಬಗ್ಗೆ ಮಾಹಿತಿ ಬಂದಿರಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವಾಗ ಇದನ್ನು ಕೇಳಿಲ್ಲ ಆದರೂ ಕೂಡ ಇದರ ಬಗ್ಗೆ ನಾನು ಉತ್ತರ ಹೇಳುತ್ತೇನೆ. ಎಸ್‌ಜೆಆರ್ ವೈನಲ್ಲಿ ಒಂದು ಕಾಮಗಾರಿಯನ್ನು ತೆಗೆದುಕೊಂಡರು ಸಿಆರ್‌ಎಫ್‌ನಲ್ಲಿ ಒಂದು ಕಾಮಗಾರಿಯನ್ನು ತೆಗೆದುಕೊಂಡಿದ್ದಾರೆ. ಬರಗಾಲದಲ್ಲಿ ಸ್ವಲ್ಪ ಹಣ ಬಂದಿತ್ತು, 2003–04ರಲ್ಲಿ 22.63 ಲಕ್ಷ ರೂಪಾಯಿಗಳು ಇಟ್ಟಿದ್ದರು. ಖರ್ಚು ಕೂಡ ಅಷ್ಟೇ ಆಗಿದೆ. 2004–05ನೇ ಸಾಲಿನಲ್ಲಿ ಖರ್ಚು 18 ಲಕ್ಷ ರೂಗಳು ಆಗಿದೆ. ಎಸ್‌ಜೆಆರ್‌ವೈನಲ್ಲಿ ಕೂಡ ಆಗಿದೆ. ಪರಿಹಾರ ಕಾಮಗಾರಿಗಳಲ್ಲಿ 4.7 ರೂಗಳು ಆಗಿದೆ: ಅಲ್ಲಿ ಖರ್ಚು ಕೂಡ ಅಷ್ಟೇ ಆಗಿದೆ. 41 ಲಕ್ಷ ರೂಗಳ ಅನುದಾನವನ್ನು ಇಟ್ಟಿದ್ದರು. ಅಷ್ಟೇ ಹಣ ಖರ್ಚು ಕೂಡ ಆಗಿದೆ. ಮುಂದೆ ಯಾವುದೇ ಹಣ ಇಲ್ಲ. ತಾವು ಕೇಳುತ್ತಿರುವ ಪ್ರಶ್ನೆಯ ಉದ್ದೇಶ ನಮಗೆ ಗೊತ್ತು, ಅಷ್ಟೂ ಕೂಡ ಮಾಡುವುದಕ್ಕೆ ಮುಂದೆ ಬರಗಾಲ ಏನಾದರೂ ಬಂದರೆ ನಿಮ್ಮದೂ ಕೂಡ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಇದರ ಬಗ್ಗೆ ಪರಿಶೀಲನೆಯಲ್ಲಿದೆ.

ಶ್ರೀ ಎಸ್.ಎಸ್. ಪಾಟೀಲ್:– ಇದೊಂದು ಬಹಳ ಮಹತ್ವದ ಯೋಜನೆಯಾಗಿದೆ. ಬಹುಶಃ ನಮಗೂ ಕೂಡ ಕಲ್ಪನೆ ಇಲ್ಲದಹಾಗೆ ಅಲ್ಲಿ ಒಬ್ಬರು ಸ್ವಾಮಿಗಳು ಬಂದಿದ್ದಾರೆ. ನಂದಿವೇರಿ ಮಠದ ಸ್ವಾಮಿಗಳು ಬಂದು ನಮಗೆ ಗಿಡಗಳನ್ನು ಹಚ್ಚಿಕೊಡಿರಿ ನಾವು ಅದನ್ನು ಜೋಪಾನ ಮಾಡುತ್ತೇವೆಂದು ಹೇಳಿದರು. ನಾವೆಲ್ಲಾ ಜಿಲ್ಲಾ ಪಂಚಾಯಿತಿಯವರು ಮತ್ತು ಜಿಲ್ಲಾಧಿಕಾರಿಗಳು ಜೊತೆ ಮಾತನಾಡಿಕೊಂಡು ಆ ಕೆಲಸವನ್ನು ಪ್ರಾರಂಭ ಮಾಡಿ ಒಂದು ಲಕ್ಷ ಸಸಿಗಳನ್ನು ನೆಟ್ಟು ಅದಕ್ಕೆ ಫೆನ್ಸಿಂಗ್ ಹಾಕಿಬಿಟ್ಟು ಅದನ್ನು ಜೋಪಾನ ಮಾಡುತ್ತಿದ್ದಾರೆ. ಹಾಗೆಯೇ ಇದನ್ನು ಆ ಯೋಜನೆಯಲ್ಲಿ ಸೇರಿಸಿ ಕೊಂಡು ಹಾಗೆಯೇ ಸಿಂಗಟಾಲೂರು ದೇವಸ್ಥಾನದ ದೊಡ್ಡಗುಡ್ಡ ಅದೂ ಕೂಡ ಒಂದು ಪರಿಸರ ಮಾಡುವಂತಹದ್ದು, ಈ ಯೋಜನೆಯಲ್ಲಿ ಹಾಕಿಕೊಂಡು ಬರಗಾಲದಲ್ಲಿ ಹಣವನ್ನು ಹಾಕಿಕೊಂಡು ನಿಮ್ಮ ಹಣವನ್ನು ಅಷ್ಟು ಹಾಕಿಕೊಂಡು ಮಾಡಿದರೆ ಪ್ರತಿ ತಾಲ್ಲೂಕಿನಲ್ಲಿಯೂ ಪ್ರತಿ ವರ್ಷ ಒಂದು ಲಕ್ಷ ಸಸಿಗಳನ್ನು ನೆಡಬಹುದು. ಆ ರೀತಿಯಾಗಿ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ ಎಂಬುದರ ಬಗ್ಗೆ ತಾವು ಹೇಳಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಾಣ

9(448) ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಿರೇಕೆರೂರು ತಾಲ್ಲೂಕಿನಲ್ಲಿ ಅವಶ್ಯವಿರುವ ಕ್ರೀಡಾಂಗಣವನ್ನು ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಬ್ಬಾರ ಖಾನ್ ಹೊನ್ನಳ್ಳಿ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಇದೆ.